ಶ್ರೀ ಪಟವಂಕ್ಕ ರತ್ನಾಕರ್.—ಅಧ್ಯಕ್ಷರೆ, ಮಾನ್ಯ ಸಚಿವರಿಗೆ ವರಾಹಿ ಜಲ ವಿದ್ಯುತ್ ಯೋಜನೆಯಲ್ಲಿ ನಡೆಯತಕ್ಕ ಕೆಲವು ಅಕ್ರಮಗಳ ಪೂರ್ಣ ಪರಿಚಯ ಇನ್ನೂ ಸಿಕ್ಕಿಲ್ಲವೆಂದು ನಾನು ಭಾವಿಸಿದ್ದೇನೆ. ಇಲ್ಲಿ ಒಂದು ಮಾತನ್ನು ಹೇಳಿದ್ದಾರೆ. ನಾನು ಹೇಳಿರುವುದು ಸತ್ಯಕ್ಕೆ ದೂರವಾದ ವಿಚಾರ ಎಂದು ಹೇಳಿದ್ದಾರೆ. ಸತ್ಯಕ್ಕೆ ದೂರವಾದ ವಿಚಾರವನ್ನು ಈ ಸದನದ ಸದಸ್ಯನಾಗಿ ತಮ್ಮ ಗಮನಕ್ಕೆ ತರತಕ್ಕ ಕೆಲಸವನ್ನು ಖಂಡಿತ ಮಾಡುವುದಿಲ್ಲ. ಅಧಿಕಾರಿಗಳಿಂದ ಬರತಕ್ಕ ಮಾಹಿತಿಯನ್ನು ಆಧಾರವಾಗಿಟ್ಟು ಕೊಂಡು ನಾವು ತೀರ್ಮಾನಕ್ಕೆ ಬರುವುದು ಖಂಡಿತ ಸರಿಯಲ್ಲ. ಆದ್ದರಿಂದ ತಮ್ಮಲ್ಲಿ ಒಂದು ವಿಚಾರ ಹೇಳುತ್ತೇನೆ. ಅಧಿಕಾರಿಗಳು ಮತ್ತು ಗುತ್ತಿಗೆದಾರರಿಗೆ ವರಾಹಿ ಜಲವಿದ್ಯುತ್ ಯೋಜನೆ ಒಂದು ಕಾಮಧೇನುವಾಗಿದೆ. ದಯವಾಡಿ ಮಾನ್ಯ ಸಚಿವರು ಅಲ್ಲಿಗೆ ಬರಲಿ. ಸಾರ್ವಜನಿಕರ ದೂರುಗಳನ್ನು ಅಲ್ಲೇ ಪಡೆದು ಪರಿಶೀಲಿಸಿ ಆ ಬಗ್ಗೆ ಕ್ರಮ ತೆಗೆದುಕೊಂಡರೆ ನಮಗೆ ಖಂಡಿತವಾಗಿ ಅಲ್ಲಿ ಏನು ನಡೆಯುತ್ತಿದೆ ಎಂಬುದು ಮನವರಿಕೆಯಾಗುತ್ತದೆ. ಇಲ್ಲದಿದ್ದರೆ ಅಧಿಕಾರಿಗಳು ಕೊಡತಕ್ಕ ಉತ್ತರ ಮತ್ತು ನಾವು ಕಳಿಸತಕ್ಕ ಪ್ರಶ್ನೆ ಸುಮ್ಮನೆ ಒಂದು ಪರಂಪರೆಯಾಗುತ್ತದೆ. ಪ್ರಶ್ನೆ ಉತ್ತರ ಏನೋ ಒಂದು ಕಾಲತಾಳೀಯವಾಗುತ್ತದೆ. ಅದಕ್ಕೋಸ್ಕರ ದಯವಾಡಿ ತಾವು ಬರಬೇಕು, ರೈತರಿಗೆ ಯಾವರೀತಿ ಅನ್ಯಾಯವಾಗಿದೆ, ಎಷ್ಟು ಲಕ್ಷ ರೂಪಾಯಿಗಳ ಬೆಲೆ ಬಾಳತಕ್ಕ ಮರಗಳನ್ನು ಅಕ್ರಮವಾಗಿ ಕಡಿಯುತ್ತಿದ್ದಾರೆ ಎಂಬ ಬಗ್ಗೆ ಸಾಕ್ಷಿಗಳಿವೆ. ಅಲ್ಲಿಗೆ ತಾವು ಬಂದರೆ ಪೂರ್ಣ ಮಾಹಿತಿ ಸಿಗುತ್ತದೆಂದು ಹೇಳುತ್ತೇನೆ.

ಶ್ರೀ ಜೆ. ಎಸ್. ದೇಶ್‌ಮುಖ್.—ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ನಾನೂ ಸಹ ಆ ಜಿಲ್ಲೆಗೆ ಪ್ರವಾಸ ಹೋಗಿಬಂದಿದ್ದೇನೆ. ನಾನು ಅಲ್ಲಿಗೆ ಹೋಗುವ ದಿನಾಂಕವನ್ನೂ ಕೂಡ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ. ಎಷ್ಟು ಜನರಿಗೆ ಪರಿಹಾರವನ್ನು ಇನ್ನೂ ಕೊಟ್ಟಿಲ್ಲ, ಎಷ್ಟು ಜನರಿಗೆ ಪರಿಹಾರವನ್ನು ಕೊಡಬೇಕೆಂಬುದರ ಬಗ್ಗೆ ಅವರ ಜೊತೆಯಲ್ಲೇ ಹೋಗಿ ಸಮಕ್ಷವೇ ವಿಚಾರ ಮಾಡುತ್ತೇನೆ.

ಶ್ರೀ ಪಟವಂಕ್ಕ ರತ್ನಾಕರ್.—ಈಗ ರೈತರು ಪರಿಹಾರವನ್ನು ತೆಗೆದುಕೊಳ್ಳದೇ ಇರತಕ್ಕಂತ ಹದ್ದು ಒಂದು ವಿಭಾಗ. ಇನ್ನೊಂದು ವಿಭಾಗ ಯಾವುದೆಂದರೆ ಅರಣ್ಯಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳು ಹಾಗೂ ಗುತ್ತಿಗೆದಾರರು ಒಂದಾಗಿ ರೈತರಿಗೂ ಗುತ್ತಿಗೆದಾರರಿಗೂ ಸಂಬಂಧವಿಲ್ಲದ ಹಾಗೆ ಮಾಡಿದ್ದಾರೆ. ಆದ್ದರಿಂದ ಮಾನ್ಯ ಮಂತ್ರಿಗಳು ಒಂದು ಸಲ ಅಲ್ಲಿಗೆ ಭೇಟಿ ನೀಡಬೇಕು. ಈ ಒಂದು ವ್ಯವಹಾರದಲ್ಲಿ ತೀವ್ರವಾದ ನಿಗಾ ಇಟ್ಟರೆ ಖಂಡಿತವಾಗಿ ಲಕ್ಷಾಂತರ ರೂಪಾಯಿಗಳನ್ನು ಸರ್ಕಾರಕ್ಕೆ ಉಳಿಸಬಹುದು.

ಶ್ರೀ ಜೆ. ಎಸ್ ದೇಶ್‌ಮುಖ್.—ಈ ಸದನ ಮುಗಿದ ಕೂಡಲೇ ಅಲ್ಲಿಗೆ ಹೋಗುತ್ತೇನೆ. ಮಾನ್ಯ ಸದಸ್ಯರ ಜೊತೆಗೂಡಿ ಚರ್ಚೆ ಮಾಡಿ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ.

ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯು ೧೦೦ಕ್ಕೆ ೧೮೦ರಷ್ಟು ಕೇಂದ್ರ ಸರ್ಕಾರದ ಕಾರ್ಯಕ್ರಮ ಈ ಯೋಜನೆಡಿಯಲ್ಲಿ ಏಲ್ಲಾ ವಿದದ ಫಲಾನುಭವಿಗಳಿಗೆ ಸ್ಥಾವರಗಳನ್ನು ಸ್ಥಾಪಿಸಲು ಅವುಗಳ ಗಾತ್ರದ ಅನುಸಾರ ಸಹಾಯಧನ ದೊರಕುತ್ತದೆ. ಸಾಮಾನ್ಯವಾಗಿ ಪ್ರತಿ ಸ್ಥಾವರದ ಪೂರ್ಣ ವೆಚ್ಚದ ಮೇಲೆ ಶೇಕಡ ೩೨ರಷ್ಟು ಸಹಾಯಧನವಿರುತ್ತದೆ. ಉಳಿದ ಹಣವು ಬ್ಯಾಂಕುಗಳಿಂದ ಸಾಲದ ರೂಪದಲ್ಲಿ ದೊರೆಯುತ್ತದೆ. ಫಲಾನುಭವಿಗಳು ಅವರ ಸ್ವಂತ ಹಣದಿಂದಲೂ ಸಹಾ ಸ್ಥಾವರಗಳನ್ನು ನಿರ್ಮಿಸಿ ಸಹಾಯ ಧನ ಪಡೆಯಲು ಅವಕಾಶವಿದೆ.

ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಆರ್‌ಡಿಸಿ ೬೯ ಬಿಜಿಎಸ್ ೮೫ ದಿನಾಂಕ ೧೬-೧೧-೧೯೮೫ರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಬರೆದು ಪಶ್ಚಿಮ ಘಟ್ಟಗಳ ಯೋಜನೆಯಲ್ಲಿ ನಮೂದಿಸಿರುವ ಗುಡ್ಡಗಾಡು ಪ್ರದೇಶಗಳಿಗೆ ಅನ್ವಯಿಸುವ ಪ್ರತಿ ಸ್ಥಾವರಕ್ಕೆ ಸುಮಾರು ಶೇಕಡಾ ೬೦ರಷ್ಟು ಧನ ಸಹಾಯ ನೀಡಲು ಕೋರಲಾಗಿತ್ತು. ದೀರ್ಘಕಾಲದ ವ್ಯವಹಾರದ ನಂತರ ಕೇಂದ್ರ ಸರ್ಕಾರವು ದಿನಾಂಕ ೧೮-೩-೧೯೮೫ರ ಪತ್ರದಲ್ಲಿ ಈ ವಿಚಾರವನ್ನು ವಿಷದಪಡಿಸಿ ಯೋಜನಾ ಆಯೋಗದ ಒಪ್ಪಿಗೆ ಪ್ರಕಾರ ಈ ಕೆಳಕಂಡ ೯ ಜಿಲ್ಲೆಗಳನ್ನು ರಾಜ್ಯದಲ್ಲಿ ಗುಡ್ಡಗಾಡು ಪ್ರದೇಶವೆಂದು ತಿಳಿಸಿ ಈ ಪ್ರದೇಶದಲ್ಲಿನ ಫಲಾನುಭವಿಗಳು ಸ್ಥಾಪಿಸುವ ಅನಿಲ ಸ್ಥಾವರಗಳಿಗೆ ರಾಷ್ಟ್ರೀಯ ಜೈವಾನಿಲ ಅನಿಲ ಯೋಜನೆಯಲ್ಲಿ ಗುಡ್ಡಗಾಡು ಪ್ರದೇಶಗಳಿಗೆ ನಮೂದಿಸಿರುವ ಸಹಾಯಧನವನ್ನು ಕೊಡಬಹುದೆಂದು ತಿಳಿಸಿತು.

ಜಿಲ್ಲೆಗಳ ಹೆಸರು :

೧) ಬೆಳಗಾಂ, ೨) ಚಿಕ್ಕಮಗಳೂರು, ೩) ಕೊಡಗು ೪) ಧಾರವಾಡ ೫) ಹಾಸನ ೬) ಮೈಸೂರು ೭) ಶಿವಮೊಗ್ಗ, ೮) ದಕ್ಷಿಣ ಕನ್ನಡ ೯) ಉತ್ತರ ಕನ್ನಡ ಮೇಲೆ ಸೂಚಿಸಿದ ಕೇಂದ್ರ ಸರ್ಕಾರದ ವಿವರಣೆಯ ಅನುಸಾರವಾಗಿ ರಾಜ್ಯ ಸರ್ಕಾರವು ಈ ಯೋಜನೆಯನ್ನು ಕಾರ್ಯಗತ ಮಾಡುತ್ತಿರುವ ಅಧಿಕಾರಿಗಳಿಗೆ ಆದೇಶ ನೀಡಿ ೧-೪-೧೯೮೭ರಿಂದ ಸದರಿ ೯ ಜಿಲ್ಲೆಗಳಲ್ಲಿ ಸ್ಥಾಪಿಸುವ ಅನಿಲ ಸ್ಥಾವರಗಳಿಗೆ ಗುಡ್ಡಗಾಡು ಪ್ರದೇಶಗಳಿಗೆ ಅನುಗುಣವಾಗುವ ಧನಸಹಾಯ ಮಂಜೂರು ಮಾಡಬಹುದೆಂದು ತಿಳಿಸಲಾಯಿತು.

ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮತ್ತು ಆಯೋಗ ಇವೆರಡೂ ಸಂಸ್ಥೆಗಳು ಸಹಾ ಈ ಕಾರ್ಯದಲ್ಲಿ ನಿರತವಾಗಿವೆ ಮತ್ತು ಕೇಂದ್ರ ಸರ್ಕಾರವು ಅಶಾಯದ ಗುರಿಯನ್ನು ಸಹಾ ನಿಗದಿ ಮಾಡಿದೆ. ಈ ಸಂಸ್ಥೆಗಳ ಪ್ರಗತಿಯನ್ನು ಮುಂಬಯಿನ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ ಮತ್ತು ಕೇಂದ್ರ ಸರ್ಕಾರ ಪ್ರತ್ಯೇಕವಾಗಿ ಪರಿಶೀಲಿಸುತ್ತಾರೆ. ಈ ೯ ಜಿಲ್ಲೆಗಳಿಗೂ ರಾಜ್ಯ ಸರ್ಕಾರವು ಗುಡ್ಡಗಾಡು ಪ್ರದೇಶಗಳ ಧನಸಹಾಯದ ಸವಲತ್ತನ್ನು ಕೊಟ್ಟಿದ್ದನ್ನು ಮನಗಂಡು ಮುಂಬಯಿನ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ಕೇಂದ್ರ ಕಛೇರಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಸದರಿ ೯ ಜಿಲ್ಲೆಗಳಲ್ಲಿ ತಮ್ಮ ಮತಿಯಿಂದ ಸ್ಥಾಪಿಸುವ ಅನಿಲ ಸ್ಥಾವರಗಳಿಗೂ ಈ ಸೌಲಭ್ಯವನ್ನು ಮಂಜೂರು ಮಾಡಬೇಕೆಂದು ಕೇಳಲಾಗಿ ಕೇಂದ್ರ ಸರ್ಕಾರವು ಪತ್ರ ಬರೆದು ಈ ೯ ಜಿಲ್ಲೆಗಳಲ್ಲಿ ಕೇವಲ ೪೦ ತಾಲ್ಲೂಕುಗಳಿಗೆ ಮಾತ್ರ ಸದರಿ ಸೌಲಭ್ಯವನ್ನು ಮಂಜೂರು ಮಾಡಬಹುದೆಂದು ತಿಳಿಸಿದ್ದಾರೆ ಎಂದೂ ತಿಳಿದು ಬಂದಿದೆ.

ಈ ವಿಚಾರವನ್ನು ೩೧-೧೦-೧೯೮೬ರಲ್ಲಿ ಅಭಿವೃದ್ಧಿ ಆಯುಕ್ತರವರ ಅಧ್ಯಕ್ಷತೆಯಲ್ಲಿ ಜರುಗಿದ ರಾಜ್ಯ ಮಟ್ಟದ ಸವನ್ವಯ ಮತ್ತು ಪರಿಶೀಲನಾ ಸಭೆಯಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿರ್ದೇಶಕರೂ ಪ್ರಸ್ತಾಪ ಮಾಡಿದರು, ಅಭಿವೃದ್ಧಿ ಆಯುಕ್ತರು ಈ ಬಗ್ಗೆ ನಡೆದ ವ್ಯವಹಾರದ ಪತ್ರಗಳನ್ನು ಪರಿಶೀಲಿಸಿ ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ ಬಗೆಹರಿಸಿಕೊಳ್ಳಬೇಕೆಂದು ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ ನಿರ್ದೇಶಕರಿಗೆ ಆದೇಶ ನೀಡದರು ಈ ವಿಚಾರವಾಗಿ ಕೇಂದ್ರ ಸರ್ಕಾರಕ್ಕೆ ಅವರ ಕೋರಿಕೆಯಂತೆ ಇನ್ನೂ ಹೆಚ್ಚಿನ ಮಾಹಿತಿಯನ್ನು ಒದಗಿಸಲಾಯಿತು. ಅಂತಿಮವಾಗಿ ಕೇಂದ್ರ ಸರ್ಕಾರವು ತಮ್ಮ ಪತ್ರ ದಿನಾಂಕ ೨೦-೨-೧೯೮೭ರ ಪತ್ರದಲ್ಲಿ ವಿವರಣೆ ನೀಡಿ ಕರ್ನಾಟಕ ರಾಜ್ಯದಲ್ಲಿ ಯೋಜನಾ ಆಯೋಗವು ೯ ಜಿಲ್ಲೆಗಳಲ್ಲಿ ಗುರ್ತಿಸಿರುವ ೪೦ ತಾಲ್ಲೂಕುಗಳಿಗೆ ಮಾತ್ರ ಗುಡ್ಡಗಾಡು ಪ್ರದೇಶದ ಧನಸಹಾಯವನ್ನು ಮಂಜೂರು ಮಾಡಬಹುದೆಂದು ತಿಳಿಸಿದ್ದಾರೆ.

ಮೇಲ್ಕಂಡ ಆದೇಶದಂತೆ ರಾಜ್ಯ ಸರ್ಕಾರವು ಈ ಯೋಜನೆ ಕಾರ್ಯಗತ ಮಾಡುವ ಅಧಿಕಾರಿಗಳಿಗೆ ಆದೇಶ ನೀಡಿ ೧-೪-೧೯೮೭ರಿಂದ ಈ ೯ ಜಿಲ್ಲೆಗಳಲ್ಲಿ ಕೇವಲ ೪೦ ತಾಲ್ಲೂಕುಗಳಿಗೆ ಮಾತ್ರ ಸದರಿ ಸವಲತ್ತನ್ನು ಕೊಡಲು ತಿಳಿಸಲಾಗಿದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಅಧ್ಯಕ್ಷರೇ, ಈಗ ೬೦ ಪರ್ಸೆಂಟ್ ಸಹಾಯಧನವನ್ನು ೯ ಜಿಲ್ಲೆಗಳಿಗೆ ಮಾತ್ರ ಅನ್ವಯ ಮಾಡಿರುವುದು ಸರಿಯಷ್ಟೇ ಇದರಿಂದ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲೂ ಮತ್ತು ಶಿವಮೊಗ್ಗ ಜಿಲ್ಲೆ ಮತ್ತು ಇತರೆ ಜಿಲ್ಲೆಗಳಲ್ಲಿ ಗುಡ್ಡಗಾಡು ಇಲ್ಲದೇ ಇರುವ ಪ್ರದೇಶದಲ್ಲೂ ಕೂಡ ಗೋಬರ್ ಗ್ಯಾಸ್ ಘಟಕಗಳ ಬಗ್ಗೆ ಕೆಲಸ ಪ್ರಾರಂಭ ಮಾಡಿದ್ದಾರೆ. ಈಗ ಅಲ್ಲಿ ಬಾವಿ ತೋಡಿದ್ದು, ಇತರ ಕೆಲಸ ಕಾರ್ಯಗಳನ್ನು ಮಾಡಿದ್ದು ಸರ್ಕಾರ ಹೊರಡಿಸಿರುವ ಸುತ್ತೋಲೆ ಪ್ರಕಾರ ಅಲ್ಲಿನ ರೈತರು ವಿಚಿತ್ರ ಪರಿಸ್ಥಿತಿಗೆ ಒಳಗಾಗಿದ್ದಾರೆ. ಇವತ್ತು ಅಲ್ಲಿನ ರೈತರಿಗೆ ಕೇಂದ್ರ ಸರ್ಕಾರದ್ದು ಯಾವುದು, ರಾಜ್ಯ ಸರ್ಕಾರದ್ದು ಯಾವುದು ಎಂಬುದು ಗೊತ್ತಿರುವುದಿಲ್ಲ. ಅಲ್ಲಿನ ಅಧಿಕಾರಿಗಳು ನಿಮಗೆ ಧನಸಹಾಯ ಸಿಗುತ್ತದೆ ತಾವು ಕೆಲಸ ಪ್ರಾರಂಭ ಮಾಡಿ ಎಂದು ರೈತರಿಂದ ಕೆಲಸ ಮಾಡಿಸಿದ್ದು ಇವತ್ತು ಅವರೂ ಬವಣೆಗೆ ಒಳಗಾಗಿದ್ದಾರೆ. ಇವತ್ತು ಸರ್ಕಾರ ಮಧ್ಯೆ ಪ್ರವೇಶ ಮಾಡಿ ಇವರ ಬವಣೆಯನ್ನು ನಿವಾರಿಸುವುದಕ್ಕೆ ಸಾಧ್ಯವಿಲ್ಲವೇ ? ತಾವು ೪೦ ತಾಲ್ಲೂಕುಗಳಿಗೆ ಮಾತ್ರ

ಗುಡ್ಡಗಾಡು ಪ್ರದೇಶದ ಧನಸಹಾಯವನ್ನು ವಂಂಜೂರು ಮಾಡಬಹಂದೆಂದು ತಿಳಿಸಿದ್ದೀರಿ. ಕಡೂರು, ತರೀಕೆರೆ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳು ಕೂಡಾ ಗುಡ್ಡಗಾಡು ಪ್ರದೇಶಕ್ಕೆ ಸೇರಿದ್ದು ಅವನ್ನು ಬಿಟ್ಟುಬಿಟ್ಟಿದ್ದೀರಿ, ಚಿಕ್ಕಮಂಗಳೂರು ಜಿಲ್ಲೆಯ ಕಡೂರು, ತರೀಕೆರೆ ತಾಲ್ಲೂಕಿನ ಅರ್ಧ ಭಾಗ ಗುಡ್ಡುಗಾಡು ಪ್ರದೇಶಕ್ಕೆ ಸೇರಿವೆ. ಇಲ್ಲಿ ಗುಂಡಿ ತೋಡಿರತಕ್ಕ ರೈತರ ಬವಣೆಯನ್ನು ಯಾವ ರೀತಿ ನಿವಾರಣೆ ಮಾಡುತ್ತೀರಿ ? ಸಾವಿರಾರು ಜನ ರೈತರು ೬೫ ಪರ್ಸೆಂಟ್ ಸಬ್ಸಿಡಿ ಸಿಗುತ್ತದೆಂದು ಹೇಳಿ ಗುಂಡಿ ತೋಡಿದ್ದಾರೆ. ಆ ಗುಂಡಿಯಲ್ಲಿ ಬೀಳುವವರು ಯಾರು ? ಇವತ್ತು ರಾಜ್ಯ ಸರ್ಕಾರ ಮಧ್ಯೆ ಪ್ರವಾಶ ಮಾಡಿ ಅವರಿಗೆ ಸಹಾಯಧನ ಕೊಡಿಸಬೇಕು. ಇವತ್ತು ೪೦ ತಾಲ್ಲೂಕುಗಳು ಎನ್ನುವ ಬದಲು ಜಿಲ್ಲಾವಾರು ಸಹಾಯ ಮಾಡುವಂತೆ ಮಾಡಿದರೆ ಎಲ್ಲಾ ಜಿಲ್ಲೆಯ ಎರಡೆರಡು ತಾಲ್ಲೂಕುಗಳು ಇದರಲ್ಲಿ ಸೇರುವುದರಿಂದ ಜಿಲ್ಲಾವಾರು ಕಾರ್ಯಕ್ರಮ ಏಕೆ ತೆಗೆದುಕೊಳ್ಳಬಾರದು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಭಾಪತಿಯವರೇ, ಈ ಸೌಕರ್ಯ ದೇಶದ ಉತ್ತರ ಭಾಗದಲ್ಲಿನ ಗುಡ್ಡಗಾಡು ಪ್ರದೇಶಗಳಿಗೆ ಸೀಮಿತವಾಗಿತ್ತು, ದಕ್ಷಿಣ ಭಾರತದ ರಾಜ್ಯಗಳ ವಂಂತ್ರಿಗಳು ಸಭೆ ಸೇರಿದಾಗ ಈ ಪ್ರಶ್ನೆಯನ್ನು ನಾವು ಕೇಂದ್ರ ಸರ್ಕಾರದ ಮುಂದೆ ಇಟ್ಟು ಈ ಸೌಕರ್ಯ ನಮಗೂ ಬೇಕು ಎಂದು ಹೇಳಿ ನಮ್ಮ ರಾಜ್ಯದ ಪರವಾಗಿ ಕಾಗದವನ್ನು ಸಹಾ ಬರೆದಿದ್ದೇವೆ. ಪಶ್ಚಿಮ ಘಟ್ಟದಲ್ಲಿರತಕ್ಕ ಪ್ರದೇಶಗಳಿಗೆ ಶೇಕಡ ೬೦ರಷ್ಟು ಏನು ಸೌಕರ್ಯ ಕೊಡುತ್ತಿದ್ದಾರೆ ಅದನ್ನು ನಮಗೆ ಕೊಡಬೇಕೆಂದು ಬೇಡಿಕೆಯನ್ನು ಇಟ್ಟೆವು, ಆಗ ಅದಕ್ಕೆ ವಂಂಜೂರಾತಿಯನ್ನು ಕೊಟ್ಟರು. ವಂಂಜೂರಾತಿ ಪತ್ರದಲ್ಲಿ ಅವರು ಏನು ಹೇಳಿದರು, ೯ ಜಿಲ್ಲೆಗಳಿಗೂ ಕೂಡಾ ಶೇಕಡ ೬೦ ಸಬ್ಸಿಡಿ ಸೌಕರ್ಯ ಕೊಡಬೇಕು ಎಂದು ಹೇಳಿ ಕೊಟ್ಟರು. ಈ ೬೦ರಷ್ಟು ಕೊಟ್ಟ ಕೆಲವೇ ದಿನಗಳಲ್ಲಿ ಇದು ೯ ಜಿಲ್ಲೆಗಳಲ್ಲಿ ಪಶ್ಚಿಮ ಘಟ್ಟ ಯೋಜನೆ ಆಳವಡಿಸಿರತಕ್ಕ ೪೦ ತಾಲ್ಲೂಕಂಗಳಿಗೆ ಮಾತ್ರ ಸೀಮಿತ ಗೊಳಿಸಬೇಕೆಂದು ವಂತ್ತೊಂದು ಆದೇಶವನ್ನು ಕೊಟ್ಟಿದ್ದಾರೆ. ನೂರಕ್ಕೆ ನೂರು ಕೇಂದ್ರ ಸಹಾಯ ಧನ ಕೊಡುತ್ತಿರುವುದರಿಂದ ಅವರ ಆದೇಶಕ್ಕೆ ಅನಂಗುಣವಾಗಿ ನಾವು ಕೆಲಸ ಮಾಡಬೇಕೇ ಹೊರತು ಅದನ್ನು ನಾವು ಉಲ್ಲಂಘನೆ ಮಾಡುವುದಕ್ಕಾಗುವುದಿಲ್ಲ. ವಂತ್ತು ಮೊದಲ ಆದೇಶದ ಪ್ರಕಾರ ನಾವು ಕೊಟ್ಟಿರುವುದು ನಿಜ. ಆದರೆ ಅದನ್ನು ತಿದ್ದಿ ೧೫-೩-೧೯೮೭ರಂದು ಆದೇಶವನ್ನು ಬದಲಾವಣೆ ಮಾಡಿದ್ದಾರೆ. ಇದರಿಂದ ಅಲ್ಲಿಗೆ ಬರುವ ಸಬ್ಸಿಡಿಯಲ್ಲಿ ಸ್ವಲ್ಪ ಕಡಿಮೆ ಆಗಿದೆ. ಅವರಿಗೆ ಶೇಕಡ ೬೫ರ ಬದಲು ಶೇಕಡ ೩೨ರಷ್ಟು ಸಬ್ಸಿಡಿ ಸಿಗುತ್ತದೆ. ಪಶ್ಚಿಮ ಘಟ್ಟ ಯೋಜನೆಯಲ್ಲಿ ಕಡೂರಾಗಲೀ, ತರೀಕೆರೆಯಾಗಲೀ ಸೇರಿಲ್ಲ, ಚಿಕ್ಕಮಗಳೂರಿನ ಕೊಪ್ಪ, ಶೃಂಗೇರಿ, ಮೂಡಿಗೆರೆ, ಹಾಗೂ ನರಸಿಂಹರಾಜಪುರ ಜಿಲ್ಲೆಗಳನ್ನೂ ಬಿಟ್ಟರೆ ಬಯಲು ಪ್ರದೇಶ ಇದರಲ್ಲಿ ಸೇರಿಲ್ಲ. ಆ ದೃಷ್ಟಿಯಿಂದ ವತ್ತೊಮ್ಮೆ ಆದೇಶ ಹೊಡಿರಿಸಿದ್ದರಿಂದ ಅಲ್ಲಿದ ರೈತರಿಗೆ ಅನ್ಯಾಯವಾಗಿರುವುದರಿಂದ ಆ ಜನರೂ ಗುಡ್ಡಗಾಡಿನ ಜನರು ಎಂಬಂದಾಗಿ ಭಾವಿಸಿ ಅವರಿಗೂ ಈ ಸಹಾಯವನ್ನೂ ವುಂದಂವರಿಸಬೇಕೆಂದು ಸಂಬಂಧಪಟ್ಟ ವಂತ್ರಿಗಳಿಗೆ ಪತ್ರವನ್ನು ಬರೆಯುತ್ತೇವೆ. ಆ ಪತ್ರಕ್ಕೆ ಏನಾದರೂ ಪುರಸ್ಕಾರ ಸಿಕ್ಕಿದರೆ ಆ ಜನರಿಗೂ ನ್ಯಾಯ, ಸಹಾಯ ಸಿಗುತ್ತದೆ. ಇಲ್ಲದಿದ್ದರೆ ಅವರು ಇರುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಇವತ್ತು ಗುಂಡಿ ತೋಡಿ ಡ್ರಮ್ ಹಾಕಿರುವವರ ಗತಿ ಏನು ? ಅವರಿಗೆ ಶೇಕಡ ೬೫ರಷ್ಟು ಸಹಾಯ ಸಿಗುವುದಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ರಾಜ್ಯ ಸರ್ಕಾರ ಯಾವ ರೀತಿಯ ರಿಯಾಯಿತಿಯನ್ನೂ ಇದಕ್ಕೆ ಕೊಡುವುದಕ್ಕೆ ಸಿದ್ಧ ಇಲ್ಲ.

ಶ್ರೀ ಬಿ. ಆರ್. ನೀಲಕಂಠಪ್ಪ.—ಕಡೂರು ತಾಲ್ಲೂಕಿನಲ್ಲಿ ೬೫ ಪರ್ಸೆಂಟ್ ಕೆಲವರು ತೆಗೆದಂ ಕೊಂಡಿದ್ದಾರೆ. ಇನ್ನೂ ಕೆಲವರಿಗೆ ಕೊಡಬೇಕಾಗಿದೆ ನಮ್ಮಲ್ಲೂ ಕೆಲವರಿಗೆ ಕೊಟ್ಟಿದ್ದು ಚಿಕ್ಕಮಂಗಳೂರು ವಂತ್ತು ಶಿವಮೊಗ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳಲ್ಲಿ ಬಿಟ್ಟಿದ್ದಾರೆ ಕೆಲವರಿಗೆ ಕೊಟ್ಟು ಕೆಲವರಿಗೆ ಬಿಡಂವುದು ಯಾವ ನ್ಯಾಯಸಾ್ವಮಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸ್ಪಷ್ಟವಾಗಿ ಹೇಳಿ ಆಜ್ಞೆ ಹೊರಡಿಸಿದ್ದೇವೆ. ಆ ಕಾಲದಲ್ಲಿ ಯಾರು ಯಾರಿಗೆ ಲಾಭ ಆಯಿತು ಅದನ್ನು ವಾಪಸ್ ತೆಗೆದು ಕೊಳ್ಳಿ ಎಂದು ಕೇಂದ್ರದ ಆದೇಶ ಇದೆ ಸ್ವಾಮಿ.

ಇದನ್ನು ಕೂಡ ವಾಪಸ್ಸು ಪಡೆಯಬೇಕಾಗುತ್ತದೆ.

ಶ್ರೀ ಪಟಮಕ್ಕಿ ರತ್ನಾಕರ್.—೬೫ ಪರ್ಸೆಂಟ್ ಏನಿದೆ, ಅದನ್ನು ೩೨ ಪರ್ಸೆಂಟ್‌ಗೆ ಏತಕ್ಕೆ ಇಳಿಸಿದಿರಿ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಸಾ ಮಿ, ಇಷ್ಟೊತ್ತು ಹೇಳಿದ್ದೇನೆ. ೬೫ ಪರ್ಸೆಂಟ್ ೯ ಜಿಲ್ಲೆಗಳಿಗೆಂದು ಕೇಂದ್ರದಿಂದ ಪತ್ರ ಬಂತು ಅದರ ಪ್ರಕಾರ ಆದೇಶ ಕೊಟ್ಟಿದ್ದೆವು. ತದನಂತರ, ೯ ಜಿಲ್ಲೆಗಳಲ್ಲಿ ೪೦ ತಾಲ್ಲೂಕುಗಳು ಮಾತ್ರ ಕೊಡಬೇಕೆಂದು ಪತ್ರ ಬಂತು. ಅದರ ಪ್ರಕಾರ ೪೦ ತಾಲ್ಲೂಕುಗಳನ್ನು ಬಿಟ್ಟರೆ, ಬೇರೆ ತಾಲ್ಲೂಕುಗಳಿಗೆ ಇದನ್ನು ಅನ್ವಯಿಸುವುದಿಲ್ಲ.

ಮಂತ್ರಿಗಳ ಹೇಳಿಕೆ.

ಸ್ಪೃಶ್ಯೇತರ ಪದವೀಧರರ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡ ನಿರ್ಣಯದ ಬಗ್ಗೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ತಮ್ಮ ಅಪ್ಪಣೆ ಪಡೆದು, ಸ್ಪೃಶ್ಯೇತರ ಪದವೀಧರರ ವಿಚಾರದಲ್ಲಿ ಸರ್ಕಾರ ತೆಗೆದುಕೊಂಡಿರುವ ನಿರ್ಣಯದ ಬಗ್ಗೆ ಈ ಒಂದು ಹೇಳಿಕೆ ಕೊಡುತ್ತೇನೆ.

ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಸ್ಪೃಶ್ಯೇತರ ಪದವೀಧರರ ಸಮಸ್ಯೆ ಕಳೆದ ೧೦ ವರ್ಷಗಳಿಂದಲೂ ಸರ್ಕಾರದ ಮುಂದಿದೆ. ಅವರನ್ನು ಸಕ್ರಮವಾಗಿ ಸರ್ಕಾರಿ ಹುದ್ದೆಗಳಲ್ಲಿ ನೇಮಿಸಿಕೊಳ್ಳುವ ಉದ್ದೇಶದಿಂದ ೧೯೮೨ರಲ್ಲಿ ವಿಶೇಷ ನಿಯಮಗಳನ್ನು ಹೊರಡಿಸಿ ಅದರಂತೆ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ಗ್ರೂಪ್-ಸಿ ಹುದ್ದೆಗಳ ಶೇಕಡ ೫೦ ರಷ್ಟನ್ನು ಸ್ಪೃಶ್ಯೇತರ ಪದವೀಧರರಿಗೂ ಮತ್ತು ಸ್ಥಳೀಯ ಅಭ್ಯರ್ಥಿಗಳಿಗೂ ಕಾಯ್ದಿಡುವಂತೆ ಅವಕಾಶ ಕಲ್ಪಿಸಲಾಯಿತು. ಇದುವರೆಗೆ ಸ್ಪೃಶ್ಯೇತರ ಪದವೀಧರರ ಸಂಖ್ಯೆ ಒಟ್ಟು ೧೪,೦೦೦ ದಿಂದ ಸುಮಾರು ೮,೫೦೦ ಕ್ಕೆ ಇಳಿದಿದೆ. ಸ್ಥಳೀಯ ಅಭ್ಯರ್ಥಿಗಳ ನೇಮಕಾತಿಯನ್ನು ಇತ್ತೀಚೆಗೆ ಸಕ್ರಮಗೊಳಿಸಲಾಯಿತು. ಆದೇ ತೆರನಾಗಿ ಸ್ಪೃಶ್ಯೇತರ ಪದವೀಧರ ನೇಮಕಾತಿಯನ್ನು ಸಕ್ರಮಗೊಳಿಸುವುದಕ್ಕಾಗಿ ಮನವಿಗಳು ಬರುತ್ತಿವೆ ಮತ್ತು ಈ ಸದನದಲ್ಲಿ ಹಾಗೂ ಅನ್ಯವೇದಿಕೆಗಳ ಮೇಲೆ ಮಾನ್ಯ ಸದಸ್ಯರು ಸ್ಪೃಶ್ಯೇತರ ಪದವೀಧರರ ಪರವಾಗಿ ಅವರ ಕಳಕಳಿಯನ್ನು ವ್ಯಕ್ತಪಡಿಸುತ್ತಾ ಇದ್ದಾರೆ.

೨ ಈ ಹಿನ್ನಲೆಯಲ್ಲಿ ಸ್ಪೃಶ್ಯೇತರ ಪದವೀಧರರನ್ನು ಸರ್ಕಾರದ ಹುದ್ದೆಗಳಲ್ಲಿ ಇನ್ನೂ ತೀವ್ರವಾಗಿ ಖಾಯಂ ಹುದ್ದೆಗಳಲ್ಲಿ ನೇಮಿಸಿಕೊಳ್ಳುವ ದೃಷ್ಟಿಯಿಂದ ಸಹ ಸರ್ಕಾರವು ಆಲೋಚಿಸಿ ಮತ್ತು ಅವರ ಸಂಘದ ಪದಾಧಿಕಾರಿಗಳೊಡನೆ ಚರ್ಚಿಸಿ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಿರ್ಧರಿಸಿದೆ.—

೧) ಸರ್ಕಾರದ ಎಲ್ಲಾ ಇಲಾಖೆಗಳಲ್ಲಿರುವ ಗ್ರೂಪ್-ಸಿ ರಿಕ್ತ ಸ್ಥಾನಗಳಲ್ಲಿ ಶೇಕಡ ೪೦ ರಷ್ಟನ್ನು ಕೇವಲ ಸ್ಪೃಶ್ಯೇತರ ಪದವೀಧರರಿಗಾಗಿಯೇ ಕಾಯ್ದಿಡಲಾಗುವುದು ಮತ್ತು ಸ್ಥಳೀಯ ಅಭ್ಯರ್ಥಿಗಳಿಗಾಗಿರುವ ಶೇಕಡ ೧೦ ರಷ್ಟನ್ನು ತುಂಬಲು ಅವರು ದೊರಕದೇ ಉಳಿದು ಹೋಗಿರುವ ರಿಕ್ತ ಸ್ಥಾನಗಳನ್ನು ಸಹ ಸ್ಪೃಶ್ಯೇತರ ಪದವೀಧರರಿಗೇ ಕೊಡ ಲಾಗುವುದು.

೨) ಸ್ಪೃಶ್ಯೇತರ ಪದವೀಧರರಾಗಿ ಮುಂದುವರಿಯುತ್ತಿರುವವರ ಒಂದು ಸಾಮಾನ್ಯ ಜ್ಯೇಷ್ಠತಾ ಪಟ್ಟಿಯನ್ನು ತಯಾರಿಸಿ ಆ ಪಟ್ಟಿಯಲ್ಲಿರುವ ಜ್ಯೇಷ್ಠತೆಯ ಪ್ರಕಾರ ನೇಮಕಾತಿ ಪ್ರಾಧಿಕಾರಗಳಿಂದ ಕೋರಿಕೆ ಬಂದ ಕ್ರಮಾಂಕದಲ್ಲಿ ನೇಮಕಾತಿ ಆದೇಶಗಳನ್ನು ನೀಡುವು ದಕ್ಕಾಗಿ ಸ್ಪೃಶ್ಯೇತರ ಪದವೀಧರರ ಹೆಸರನ್ನು ಸೂಚಿಸಲಾಗುವುದು ಮತ್ತು ನೇಮಕಾತಿ ಪ್ರಾಧಿಕಾರಗಳು ಅಂತಹ ಸ್ಪೃಶ್ಯೇತರ ಪದವೀಧರರನ್ನು ಯಾವುದೇ ಪರೀಕ್ಷೆಗೆ ಅಥವಾ